**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಚಿಂಚೋಳಿ**

**ಸಿ. ಸಿ. ನಂ.*3201/2021***

**ಫಿರ್ಯಾದಿ** : ಸರ್ಕಾರದ ಪರವಾಗಿ ಚಿಂಚೋಳಿ ಪೋಲಿಸರು.

**- ವಿರುದ್ದ -**

**ಆರೋಪಿತರುಃ**

1. ಆನಂದಟೈಗರ್ ತಂದೆ ನಾಗೇಂದ್ರಪ್ಪ ಟೈಗರ್, 32 ವರ್ಷ, ಉಃ ಲೀಡರ ಕೆಲಸ, ವಾಸಃ ಚಿಂಚೋಳಿ.
2. ಆನಂದರೆಡ್ಡಿ ತಂದೆ ಬಸವರಾಜ ಚಿಂತಾಲ್, 35 ವರ್ಷ, ಉಃ ಲೀಡರ ಕೆಲಸ, ವಾಸಃ ಚಿಂಚೋಳಿ.
3. ರಾಜಪ್ಪ ತಂದೆ ಶಂಕರ ನಾಟೀಕಾರ್, 35 ವರ್ಷ, ಉಃ ಲೀಡರ ಕೆಲಸ, ವಾಸಃ ಚಿಂಚೋಳಿ.
4. ಚನ್ನಬಸಯ್ಯಾ ಸ್ವಾಮಿ ತಂದೆ ಶಂಕ್ಯಾಸ್ವಾಮಿ, ವಾಸಃ ಪಟಪಳ್ಳಿ.
5. ಅಮರೇಶ ತಂದೆ ಶಾಂತಪ್ಪ ಬೀರನಳ್ಳಿ, 27 ವರ್ಷ, ಉಃ ಡ್ರೈವರ್ ಕೆಲಸ, ವಾಸಃ ಚಿಂಚೋಳಿ.
6. ವಿಶ್ವನಾಥ ತಂದೆ ಧೂಳಪ್ಪ ಬೀರನಳ್ಳಿ, 30 ವರ್ಷ, ಉಃ ಲೀಡರ ಕೆಲಸ, ವಾಸಃ ಚಂದಾಪೂರ.

**ದೋಷಾರೋಪಣೆ**

ನಾನು ಶ್ರೀ ರವಿಕುಮಾರ ವಿ., ಬಿ.ಎ.,ಎಲ್.ಎಲ್.ಬಿ., ಪ್ರ.ದ.ನ್ಯಾ.ದಂಡಾಧಿಕಾರಿ, ಚಿಂಚೋಳಿ ಈ ಮೂಲಕ ಮೇಲೆ ಹೆಸರಿಸಲಾದ ಆರೋಪಿತರಾದ ನಿಮ್ಮ ಮೇಲೆ ಮಾಡುವ ಆರೋಪಣೆ ಏನೆಂದರೆ,

ಮೊದಲನೆಯದಾಗಿ, ದಿನಾಂಕ 24-06-2020 ರಂದು 08-30 ಎ.ಎಮ್ ಗಂಟೆಯ ಸುಮಾರಿಗೆ ಚಿಂಚೋಳಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಬರುವ ಚಿಂಚೋಳಿ ಶುಗರ ಫ್ಯಾಕ್ಟರಿಯ ಹತ್ತಿರ ಆರೋಪಿತರೆಲ್ಲರೂ ಅಕ್ರಮವಾಗಿ ಗುಂಪು ಕಟ್ಟಿಕೊಂಡು ಸದರಿ ಗುಂಪಿನ ಸದಸ್ಯರಾಗಿ ಆ ಮೂಲಕ ಭಾ.ದಂ.ಸಂ.ಕಲಂ. 143 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಮಾಡಿರುತ್ತಿರೆಂದು,

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಶುಗರ ಫ್ಯಾಕ್ಟರಿಯ ಹತ್ತಿರ ದೊಂಬಿ ಮಾಡುವ ಏಕೋದ್ದೇಶ ಹೊಂದಿ ಅಕ್ರಮ ಗುಂಪು ಕಟ್ಟಿಕೊಂಡು ಆ ಮೂಲಕ ಭಾ.ದಂ.ಸಂ.ಕಲಂ. 147 ಸಹವಾಚಕ 149 ರ ಅಡಿಯಲ್ಲಿ  ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀರೆಂದು.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವೆಲ್ಲರೂ ಶುಗರ್ ಫ್ಯಾಕ್ಟರಿಯಲ್ಲಿ ಬರುವ ಜಮೀನನ್ನು ಜಬರದಸ್ತಿಯಿಂದ ಸ್ವಾಧೀನಪಡಿಸಿಕೊಳ್ಳುವ ಉದ್ದೇಶದಿಂದ ಶುಗರ್ ಫ್ಯಾಕ್ಟರಿಯಲ್ಲಿ ಅತಕ್ರಮ ಪ್ರವೇಶ ಮಾಡಿ, ಆ ಮೂಲಕ ಭಾ.ದಂ.ಸಂ.ಕಲಂ. 447 ಸಹವಾಚಕ 149 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞದೊಳಗೆ ಮಾಡಿರುತ್ತೀಯೆಂದು,

ಮತ್ತು ನೀವೆಲ್ಲರೂ ಮೇಲ್ಕಂಡ ದೋಷಾರೋಪಗಳಿಗಾಗಿ ಈ ನ್ಯಾಯಾಲಯದ ವಿಚಾರಣೆಗೆ ಗುರಿಯಾಗಬೇಕೆಂದು ಆದೇಶಿಸುತ್ತಿದ್ದೇನೆ.

ದಿನಾಂಕಃ 30-06-2023.

**(ರವಿಕುಮಾರ .ವಿ.)**
**ಪ್ರಧಾನ ಪ್ರ.ದ.ನ್ಯಾ.ದಂಡಾಧಿಕಾರಿಗಳು**
**ಚಿಂಚೋಳಿ.**